ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಫೆಬ್ರವರಿ 5, 2016

**ಹೆಸರಾಂತ ಸಾಹಿತಿ ಸಾ. ಶಿ. ಮರುಳಯ್ಯ ಅವರ ನಿಧನಕ್ಕೆ**
**ಮುಖ್ಯಮಂತ್ರಿ ಸಂತಾಪ**

ಬೆಂಗಳೂರು, ಫೆಬ್ರವರಿ 5:

ಕನ್ನಡದ ಹೆಸರಾಂತ ಕವಿ ಹಾಗೂ ಸಾಹಿತಿ ಡಾ ಸಾ. ಶಿ. ಮರುಳಯ್ಯ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿಯಾಗಿ ನಾನು ಪ್ರಮಾಣ ವಚನ ಸ್ವೀಕರಿಸಿದ ದಿನದಂದು ನನ್ನ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಆಗಮಿಸಿ ನನಗೆ ಮೊದಲು ಶುಭ ಕೋರಿದ ಸಾಹಿತ್ಯ ಲೋಕದ ದಿಗ್ಗಜರಲ್ಲಿ ಡಾ ಸಾ. ಶಿ. ಮರುಳಯ್ಯ ಅವರೂ ಪ್ರಮುಖರು.

ಕುವೆಂಪು ಅವರ ಬಗ್ಗೆ ಅಭಿಮಾನ ಹಾಗೂ ಹಾಮಾನಾ ಅವರ ಜೊತೆ ಒಡನಾಟ ಇಟ್ಟುಕೊಂಡಿದ್ದ ಡಾ ಸಾ. ಶಿ. ಮರುಳಯ್ಯ ಅವರು ತಮ್ಮ ಬೋಧನಾ ಕ್ಷೇತ್ರದಲ್ಲಿನ ನಾಲ್ಕು ದಶಕಗಳ ಸುದೀರ್ಘ ಪಯಣದ ಜೊತೆಜೊತೆಯಲ್ಲಿಯೇ ಸಾರಸ್ವತ ಲೋಕದಲ್ಲೂ ಬಹು ಎತ್ತರಕ್ಕೆ ಬೆಳೆದದ್ದು ಇದೀಗ ಇತಿಹಾಸ.

ಕಾವ್ಯದಿಂದ ಕಾದಂಬರಿಯವರೆಗೆ, ನಾಟಕ ರಚನೆಯಿಂದ ಸಂಶೋಧನೆಯವರೆಗೆ ಕನ್ನಡ ಸಾರಸ್ವತ ಲೋಕದ ಎಲ್ಲಾ ಮಜಲುಗಳಲ್ಲೂ ವಿಶೇಷ ಕೃಷಿ ಮಾಡಿದ್ದ ಡಾ ಸಾ. ಶಿ. ಮರುಳಯ್ಯ ಅವರು ಜನಪ್ರಿಯ ಹಾಗೂ ಜನಪರ ಸಾಹಿತಿಯಾಗಿದ್ದರು ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ಬಣ್ಣಿಸಿದ್ದಾರೆ.

**********

ಡಿ ಪಿ ಎಂ